ದಿನಾಂಕ:15.04.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು : 1 ನೇ ನೇ ಎದುರುದಾರರ ಪರ:

1 ನೇ ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರುಹಾಜರಾಗಿದ್ದು ಅವರ ಪರ ಸಾಕ್ಷಿಯ ಪಾಟೀಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು : 2 ನೇ ನೇ ಎದುರುದಾರರ ಪರ: ಶ್ರೀ ಯು ಎಸ್ ಎನ್ ವಕೀಲರಿಂದ:

ಅಪಘಾತ ಸಂಬಂಧಿತವಾಗಿ ನನ್ನ ಅಣ್ಣ ಶಶಿಧರರವರು ಪೊಲೀಸರಿಗೆ ದೂರನ್ನು ಕೊಟ್ಟಿದ್ದಾರೆ. ಎದುರುದಾರರ ವಾಹನದ ಮೇಲೆ ದೂರನ್ನು ಕೊಡಲಾಗಿತ್ತು. ಅಪಘಾತ ಸಂಬಂಧಿತವಾಗಿ ನಾನೇ ದುಾರನ್ನು ಕೊಟ್ಟಿದ್ದೇನೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ನನ್ನ ಮಗ ಬಂದು ಆಸ್ಪತ್ರೆಯ ಖರ್ಚು ಜಾಸ್ತಿ ಆಗಿದೆ, ಇನ್ಸುರೆನ್ಸ್ ಕ್ಲೈಮ್ ಆಗುವುದಿಲ್ಲ ಎಂದ ಕಾರಣಕ್ಕೆ ಅಂಚೆ ಮುಖಾಂತರ ಪೊಲೀಸರಿಗೆ ದೂರನ್ನು ಕಳುಹಿಸಿದ್ದೇನೆ.

ನಾನು 1 ನೇ ಎದುರುದಾರನ ಮೇಲೆ ದೂರು ಕೊಟ್ಟರೂ ಕೂಡಾ ಪೊಲೀಸರು ನನ್ನ ಮೇಲೆಯೇ ಏಕೆ ಕೇಸು ದಾಖಲು ಮಾಡಿದ್ದಾರೆಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿ ಇದ್ದಾಗ 1 ನೇ ಎದುರುದಾರು ನನ್ನ ವಿರುದ್ದ ಕೇಸು ದಾಖಲು ಮಾಡಿದ್ದ ಕಾರಣಕ್ಕೆ ನನ್ನ ವಿರುದ್ದ ಕೇಸು ದಾಖಲಾಗಿದೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ನನ್ನ ವಿರುದ್ದ ಕೇಸು ದಾಖಲು ಮಾಡಿರುವ ವಿಚಾರ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ವೈದ್ಯಕೀಯ ಖರ್ಚು ಜಾಸ್ತಿಯಾದ ಕಾರಣ ಪರಿಹಾರ ಪಡೆಯುವ ಸಲುವಾಗಿ ಪ್ರಸ್ತುತ ಕೇಸು ದಾಖಲು ಮಾಡಿದ್ದೇವೆ.

ನಾನು ಹೇಳಿದಂತೆ ಅಪಘಾತದಿಂದ ನನಗೆ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನಾನು ತಪ್ಪು ರಸ್ತೆಯಲ್ಲಿ ಹೋಗುತ್ತಿದ್ದೆನು ಎಂದರೆ ಸಾಕ್ಷಿಯು ಕಾಮಗಾರಿಯಾಗುತ್ತಿದ್ದ ಕಾರಣ ತಪ್ಪು ರಸ್ತೆಯಲ್ಲಿ ಹೋಗಿದ್ದೇನೆ

ಎಂದು ನುಡಿಯುತ್ತಾರೆ. ಅಪಘಾತ ಕಾಲದಲ್ಲಿ ರಸ್ತೆಯ ಎರಡೂ ಭಾಗಗಳು ಸಂಚಾರಕ್ಕೆ ಮುಕ್ತವಾಗಿದ್ದವು ಎಂದರೆ ಸರಿಯಲ್ಲ. ಅಪಘಾತ ಕಾಲದಲ್ಲಿ ನಾನು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿರುವ ಕಾರಣ ಹಾಗೂ ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ ನನಗೆ ಪರಿಹಾರ ಪಡೆಯಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಅಪಘಾತ ಕಾಲದಲ್ಲಿ ನನಗೆ ಐಸಿಐಸಿಐ ಲೊಂಬಾರ್ಡ್ ವಿಮೆ ಇತ್ತು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎಲ್ಲಾ ವೈದ್ಯಕೀಯ ಬಿಲ್ಲುಗಳು ಡೂಪ್ಲಿಕೇಟ್ ಎಂದರೆ ಸರಿ. ಅವುಗಳ ಅಸಲು ಬಿಲ್ಲುಗಳನ್ನು ಐಸಿಐಸಿಐ ಲೊಂಬಾರ್ಡ್ ವಿಮಾ ಕಂಪೇನಿಗೆ ಪರಿಹಾರ ಪಡೆಯುವ ಸಮಯದಲ್ಲಿ ಕೊಟ್ಟಿದ್ದೇನೆ. ಅಪಘಾತ ಸಂಬಂಧಿತ ವೈದ್ಯಕೀಯ ಬಿಲ್ಲುಗಳನ್ನು ಈಗಾಗಲೇ ಐಸಿಐಸಿಐ ಲೊಂಬಾರ್ಡ್ ವಿಮಾ ಕಂಪನಿ ಪಾವತಿ ಮಾಡಿದೆ ಎಂದರೆ ಸಾಕ್ಷಿಯು ಸದರಿ ವಿಮಾ ಕಂಪನಿ ವೈದ್ಯಕೀಯ ಖರ್ಚಿನ ಹಣ ಪಾವತಿ ಮಾಡಿದ್ದಕ್ಕೂ ಹೆಚ್ಚು ನನಗೆ ವೈದ್ಯಕೀಯ ಖರ್ಚು ತಗುಲಿದೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವಂತೆ ಚಿಕಿತ್ಸೆಗಾಗಿ ವೈಯಕ್ತಿಕವಾಗಿ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎಲ್ಲಾ ವೈದ್ಯಕೀಯ ಬಿಲ್ಲುಗಳ ಸಂಬಂಧಿತಹಣವನ್ನು ನಮ್ಮ ವಿಮಾ ಕಂಪನಿಯವರು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀದು ಬಿಲ್ಲುಗಳನ್ನು ವಿಮಾ ಕಂಪನಿಯಿಂದ ಮರುಪಡೆದು ಈ ವ್ಯವಹಣೆಯಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಅಪಘಾತ ಕಾಲದಲ್ಲಿ ಓಡಿಸುತ್ತಿದ್ದ ಬೈಕು ನನ್ನ ಸ್ವಂತದ್ದು. ಅದನ್ನು ನಾನು ಲೋನ್ ಮಾಡಿ ಪಡೆದುಕೊಂಡಿದ್ದೆ. ಸಾಲ ತೀರಿಸಿ ಪ್ರತೀ ತಿಂಗಳು ಕಂತಿನ ಹಣ ಪಾವತಿ ಮಾಡುತ್ತಿದ್ದೆ.

ನಾನು ವೃತ್ತಿಯಲ್ಲಿ ಕೂಲಿಯಲ್ಲ ಹಾಗೂ ನನಗೆ ತಿಂಗಳ ಆಧಾಯ **3300** ರೂ. ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯಗಳಿಂದ ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ**-11** ಅಂಗನ್ಯೂನ್ಯತ ಪ್ರಮಾಣಪತ್ರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ಅರ್ಜಿ ಸಲ್ಲಿಸಿ ಪರಿಹಾರ ಪಡೆಯುವ ಸಲುವಾಗಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು